**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ದಿನಾಂಕ : 20.02.2014

## ಸುತ್ತೋಲೆ

**ಸಂಸ್ಕೃತ ಶಾಸ್ತ್ರ ಅಧ್ಯಾಪಕರ ಹಾಗೂ ಸಾರ್ವಜನಿಕರ ಗಮನಕ್ಕೆ**

**ವಿಷಯ : 2014–15ನೇ ಸಾಲಿನಲ್ಲಿ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳಿಗೆ ನೂತನ ಪಾಠ್ಯಕ್ರಮಗಳನ್ನು ರಚಿಸಿ ಅಳವಡಿಸುವ ಬಗೆಗೆ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿದ್ವನ್ಮಧ್ಯಮಾ (ಬಿ.ಎ) ಹಾಗೂ ವಿದ್ವದುತ್ತಮಾ (ಎಂ.ಎ) ತರಗತಿಗಳಿಗೆ ನೂತನ ಪಾಠ್ಯಕ್ರಮಗಳನ್ನು 2014–15ನೇ ಸಾಲಿನಲ್ಲಿ ಆಯಾ ಪದವಿಯ ಮೊದಲ ವರ್ಷಕ್ಕೆ ಅನ್ವಯವಾಗುವಂತೆ ಸಿದ್ಧಪಡಿಸಿ ಅಳವಡಿಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಅನೇಕ ವರ್ಷಗಳಿಂದ ವಿದ್ವತ್ತರಗತಿಗಳಲ್ಲಿ ಬೋಧಿತವಾಗುತ್ತಿರುವ ಪಾಠ್ಯಕಮವನ್ನು 2011–12ನೇ ಸಾಲಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವ್ಯವಸ್ಥಿತಗೊಳಿಸಿ, ಅದೇ ಸಾಲಿನಲ್ಲಿ ಅನ್ವಯವಾಗುವಂತೆ ರೂಪುಗೊಳಿಸಿತು. ಈ ಸಾಲಿನಿಂದ ಸಂಸ್ಕೃತ ವಾಙ್ಮಯದ ಆಧುನಿಕ, ಹಾಗೂ ಸಾಂಪ್ರದಾಯಿಕ ವಿಷಯಗಳ ಬೋಧನೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ಹೊಸ ಪಾಠ್ಯಕ್ರಮವನ್ನು ಅಳವಡಿಸಲು ಸಿದ್ಧತೆಯನ್ನು ಮಾಡಿಕೊಂಡಿದೆ. ಈ ಪಾಠ್ಯಕ್ರಮವು ಶಾಸ್ತ್ರೀಯ ಹಾಗೂ ಆಧುನಿಕ ವಿಷಯಗಳನ್ನು ಒಳಗೊಂಡಿದ್ದು ಈ ವಿಷಯದಲ್ಲಿ ತಮ್ಮ ಸಲಹೆ–ಸೂಚನೆಗಳಿದ್ದಲ್ಲಿ ತಿಳಿಸಲು ಕೋರಿದೆ.

ವಂದನೆಗಳೊಂದಿಗೆ,

**sd/-**
**ನಿರ್ದೇಶಕರು, (ಅಧ್ಯಯನಾಂಗ)**

**ಸಂಕೇತ :**

**ನಿರ್ದೇಶಕರು, (ಅಧ್ಯಯನಾಂಗ)**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಚಾಮರಾಜಪೇಟೆ**
**ಬೆಂಗಳೂರು–18**
ದೂರವಾಣಿ : 9483501353, **080–26701303/26705387**
Email ID: shrivara@gmail.com, karnatakasanskrituniversity@gmail.com
**ಜಾಲತಾಣ : www.ksu.ac.in**